(ಕಂದಾಯ ಇಲಾಖೆ)

# ಸಹಾಯಕಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಸಂ.ಕಂ.ಪಹಣಿ:ಅಪೀಲು:191/2014-15 ದಿನಾಂಕ:09.06.2016.

**ಉಪಸ್ಥಿತರು: ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**
**ಸಹಾಯಕ ಆಯುಕ್ತರು, ಹೊಸಪೇಟೆ.**

* * * * *

**ವಾದಿಗಳು: ಶ್ರೀ/ ಶ್ರೀಮತಿ**

1. ಆರ್.ಬಸವರಾಜಪ್ಪ ತಂದೆ ಗಂಡೆಪ್ಪ,
   ವಾಸ: ಜಿ.ನಾಗಲಾಪುರ ಗ್ರಾಮ ಮತ್ತು ಅಂಚೆ,
   ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

**[ಶ್ರೀ ಬಿ.ಹೂಲಪ್ಪ, ವಕೀಲರು, ಹೊಸಪೇಟೆ]**

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1. ರಾಜಸ್ವ ನಿರೀಕ್ಷಕರು, ನಾಡಕಛೇರಿ, ಮರಿಯಮ್ಮನಹಳ್ಳಿ,
2. ತಹಶೀಲ್ದಾರರು, ಹೊಸಪೇಟೆ.

**ವ್ಯಾಜ್ಯದಭೂಮಿನು**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹೊಸಪೇಟೆ | ಮರಿಯಮ್ಮನಹಳ್ಳಿ | ಜಿ.ನಾಗಲಾಪುರ | 345/ಇ | 00 ಎಕರೆ 90 ಸೆಂಟ್ಸ್ |

Sub Divisional Magistrate Hospet

**ಪೀಠಿಕೆ:-**

ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ಹೋಬಳಿ ಜಿ.ನಾಗಲಾಪುರ ಗ್ರಾಮದ ಸ.ನಂ.345/ಇ ಪೈಕಿ ವಿಸ್ತೀರ್ಣ:00 ಎಕರೆ 90 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಮರಿಯಮ್ಮನಹಳ್ಳಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ: ಹೆಚ್.8/2011-12 ದಿನಾಂಕ:21.11.2011 ವನ್ನು ಪ್ರಶ್ನಿಸಿ ವಾದಿಪರ ವಕೀಲರು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಅಪೀಲನ್ನು ಮತ್ತು ಅಪೀಲು ಸಲ್ಲಿಸುವಲ್ಲಿ ಆಗಿರುವ ವಿಳಂಬವನ್ನು ಮನ್ನಾ ಮಾಡಲು ಕೋರಿ ಕಾಲಮಿತಿ ಕಾಯ್ದೆಯ ಕಲಂ 5 ರಡಿಯಲ್ಲಿ ಮೇಲ್ಮನವಿಯನ್ನು ವಾದಿಪರ ವಕೀಲರು ದಿನಾಂಕ:31.10.2014 ರಂದು ಸಲ್ಲಿಸಿರುತ್ತಾರೆ.

ವಾದಿಗಳು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ನೈಸರ್ಗಿಕ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:25.11.2014 ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಪರ ವಕೀಲರ ಪ್ರಕಾರ, ಸದರಿ ವ್ಯಾಜ್ಯದ ಜಮೀನು ಮೂಲತ: ವಾದಿಯ ಪಿತ್ರಾರ್ಜಿತ ಆಸ್ತಿಯಾಗಿದ್ದು, ಜಿ.ನಾಗಲಾಪುರ ಗ್ರಾಮದ ರೊಟ್ಟಿ ಗಂಡೆಪ್ಪ ಮತ್ತು ರೊಟ್ಟಿ ರುದ್ರಮ್ಮ ಇವರಿಗೆ ಮಕ್ಕಳಿಲ್ಲದ ಕಾರಣ ವಾದಿಯಾದ ಆರ್.ಬಸವರಾಜಪ್ಪ ತಂದೆ ಒಂಟಿ ಚಂದ್ರಶೇಖರಪ್ಪ ಇವರನ್ನು ದಿನಾಂಕ:11.03.1974 ರಂದು ಊರಿನ ಹಿರಿಯರ ಮತ್ತು ಕುಟುಂಬದ ಹಿರಿಯರ ಸಮಕ್ಷಮದಲ್ಲಿ ಹಿಂದೂ ಸಂಪ್ರದಾಯದ ಪ್ರಕಾರ ದತ್ತು ತೆಗೆದುಕೊಂಡಿದ್ದು, ಈ ಬಗ್ಗೆ ದತ್ತು ಪತ್ರವನ್ನು ಬರೆದುಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ಅಂದಿನಿಂದ ರೊಟ್ಟಿ ಗಂಡೆಪ್ಪ ಇವರ ಆಶ್ರಯದಲ್ಲಿ ಬೆಳೆದಿದ್ದು, ಅವರ ಸಮಸ್ತ ಆಸ್ತಿಗೂ ವಾರಸುದಾರನಾಗಿರುತ್ತಾರೆ. ರೊಟ್ಟಿ ಗಂಡೆಪ್ಪ ಮತ್ತು ರೊಟ್ಟಿ ರುದ್ರಮ್ಮ ಇವರ ಮರನಾನಂತರ ಸದರಿ ವ್ಯಾಜ್ಯದ ಜಮೀನು ಮಾತ್ರವಲ್ಲದೇ ಸದರಿ ಜಿ.ನಾಗಲಾಪುರ ಗ್ರಾಮದಲ್ಲಿರುವ ಸ.ನಂ:299 ವಿಸ್ತೀರ್ಣ:00 ಎಕರೆ 11 ಸೆಂಟ್ಸ್; ಸ.ನಂ:135/ಎ ವಿಸ್ತೀರ್ಣ:00 ಎಕರೆ 28 ಸೆಂಟ್ಸ್; ಸ.ನಂ:185 ವಿಸ್ತೀರ್ಣ:02 ಎಕರೆ 30 ಸೆಂಟ್ಸ್; ಸ.ನಂ:202 ವಿಸ್ತೀರ್ಣ:01 ಎಕರೆ 73 ಸೆಂಟ್ಸ್; ಸ.ನಂ:123 ವಿಸ್ತೀರ್ಣ:00 ಎಕರೆ 09 ಸೆಂಟ್ಸ್; ಸ.ನಂ:289 ವಿಸ್ತೀರ್ಣ:00 ಎಕರೆ 03 ಸೆಂಟ್ಸ್; ಸ.ನಂ:290 ವಿಸ್ತೀರ್ಣ:00 ಎಕರೆ 34 ಸೆಂಟ್ಸ್; ಸ.ನಂ:291 ವಿಸ್ತೀರ್ಣ:00 ಎಕರೆ 13 ಸೆಂಟ್ಸ್; ಸ.ನಂ:325 ವಿಸ್ತೀರ್ಣ:01 ಎಕರೆ 17 ಸೆಂಟ್ಸ್; ಜಮೀನುಗಳನ್ನು ಬಿಟ್ಟು ಹೋಗಿರುವುದಾಗಿ, ಅವರ ಮರಣಾನಂತರ ಅವರ ಏಕೈಕ ವಾರಸುದಾರನಾದ ಹಾಗೂ ವಾದಿಯಾದ ಆರ್.ಬಸವರಾಜಪ್ಪ ಇವರು ವಾರಸತ್ವದ ಪ್ರಕಾರ ತಮ್ಮ ಹೆಸರಿಗೆ ಖಾತಾ ಬದಲಾವಣೆ ಮಾಡಿಸಿಕೊಂಡಿರುವುದಾಗಿ, ಅಂದಿನಿಂದಲೂ ಈವರೆಗೂ ಇವರೇ ಸದರಿ ಜಮೀನುಗಳ ಮೇಲೆ ಸ್ವಾಧೀನಾನುಭವವನ್ನು ಹೊಂದಿರುವುದಾಗಿ, ಆದರೆ ಸದರಿ ವ್ಯಾಜ್ಯದ ಜಮೀನು ಮಾತ್ರ ಖಾತಾ ಬದಲಾವಣೆ ಆಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

ವಾದಿಯು ಸದರಿ ವ್ಯಾಜ್ಯದ ಜಮೀನನ್ನು ಪೋತಿ ವಾರಸ ಪ್ರಕಾರ ತಮ್ಮ ಹೆಸರಿಗೆ ಹಕ್ಕು ಬದಲಾವಣೆಗಾಗಿ ಪ್ರತಿವಾದಿಯವರಿಗೆ ಅರ್ಜಿ ಸಲ್ಲಿಸಲಾಗಿ, ಪ್ರತಿವಾದಿಯವರಾದ ತಹಶೀಲ್ದಾರರು, ಹೊಸಪೇಟೆ ಇವರು ಯಾವುದೇ ವಿಚಾರಣೆಯನ್ನು ನಡೆಸದೇ ಸುಳ್ಳು ವಂಶವೃಕ್ಷ ನೀಡಿದ್ದಾರೆಂಬ ಕಾರಣದಿಂದ ಸದರಿ ಪ್ರಶ್ನಿತ ಹಕ್ಕು ಬದಲಾವಣೆಯನ್ನು ತಿರಸ್ಕರಿಸಿರುವುದಾಗಿ, ಸದರಿ ಆದೇಶವು ಕಾನೂನು ಬಾಹಿರವಾಗಿರುವುದಾಗಿ ತಿಳಿಸಿರುತ್ತಾರೆ.

ಸದರಿ ಪ್ರಶ್ನಿತ ಆದೇಶದಿಂದ ಬಾದಿತಗೊಂಡ ವಾದಿಯು ಸದರಿ ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ಪ್ರಶ್ನಿತ ಆದೇಶವನ್ನು ರದ್ದುಪಡಿಸಲು ಹಾಗೂ ಸದರಿ ವ್ಯಾಜ್ಯದ ಜಮೀನನ್ನು ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕೋರಿ ಮೇಲ್ಮನವಿ ಸಲ್ಲಿಸಿರುವುದಾಗಿ ವಾದಿಪರ ವಕೀಲರು ತಿಳಿಸಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಸದರಿ ವ್ಯಾಜ್ಯದ ಜಮೀನಿನ ಸ್ವಾಧೀನತೆಯ ಬಗ್ಗೆ ತಹಶೀಲ್ದಾರರು, ಹೊಸಪೇಟೆ ಇವರಿಗೆ ವರದಿಯನ್ನು ಸಲ್ಲಿಸಲು ಸೂಚಿಸಿದ್ದು, ತಹಶೀಲ್ದಾರರು, ಹೊಸಪೇಟೆ ಇವರ ಕಾರ್ಯಾಲಯದ ಪತ್ರ ಸಂಖ್ಯೆ: ಸಂ/ಕಂ/ಪಹಣಿ/04/2015-16 ದಿನಾಂಕ:17.08.2015 ರ ಮೂಲಕ ಕಂದಾಯ ನಿರೀಕ್ಷಕರು, ಮರಿಯಮ್ಮನಹಳ್ಳಿ ಇವರು ಜಿ.ನಾಗಲಾಪುರ ಗ್ರಾಮದ ಗ್ರಾಮಲೆಕ್ಕಾಧಿಕಾರಿಯೊಂದಿಗೆ ಸ್ಥಾನಿಕ ವಿಚಾರಣೆ ನಡೆಸಿ ಪಂಚನಾಮ, ಹೇಳಿಕೆಯೊಂದಿಗೆ ಸಲ್ಲಿಸಿದ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಜಿ.ನಾಗಲಾಪುರ ಗ್ರಾಮದಲ್ಲಿ ವಿಚಾರಣೆ ಮಾಡಲಾಗಿ ಹಾಗೂ ಸದರಿ ಜಮೀನು ಆಜು-ಬಾಜು(ಚೆಕ್ಕುಬಂದಿದಾರರನ್ನು)ದಾರರನ್ನು ವಿಚಾರಣೆಯನ್ನು ಮಾಡಲಾಗಿ ಸದರಿ ಜಮೀನು ಆರ್.ಬಸವರಾಜಪ್ಪ ತಂದೆ ಗಂಡೆಪ್ಪ ಇವರ ಸ್ವಾಧೀನದಲ್ಲಿರುವುದಾಗಿ ತಿಳಿದು ಬಂದಿರುತ್ತದೆ. ಸದರಿ ಜಮೀನಿನಲ್ಲಿ ಹಾಲೀ ಯಾವುದೇ ಬೆಳೆಗಳನ್ನು ಬಿತ್ತನೆಮಾಡಿರುವುದಿಲ್ಲ, ಬೀಳು ಇರುತ್ತದೆ. ಕಾರಣ ಸದರಿ ಗ್ರಾಮದ ಗ್ರಾಮಸ್ಥರು ಸಹಿಮಾಡಿದ ಮಹಜರ್‌ನೊಂದಿಗೆ ಮುಂದಿನ ಕ್ರಮಕ್ಕಾಗಿ ವರದಿ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇಲೆ, ಹಾಗೂ ತಹಶೀಲ್ದಾರರು, ಹೊಸಪೇಟೆ ಮತ್ತು ಕಂದಾಯ ನಿರೀಕ್ಷಕರು, ಮರಿಯಮ್ಮನಹಳ್ಳಿ ಇವರ ವರದಿ ಹಾಗೂ ಪಂಚನಾಮದ ಆಧಾರದ ಮೇರೆಗೆ ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ಹೋಬಳಿ ಜಿ.ನಾಗಲಾಪುರ ಗ್ರಾಮದ ಸ.ನಂ.345/ಇ ಪೈಕಿ ವಿಸ್ತೀರ್ಣ:00 ಎಕರೆ 90 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಮರಿಯಮ್ಮನಹಳ್ಳಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ: ಹೆಚ್.8/2011-12 ದಿನಾಂಕ:21.11.2011 ವನ್ನು ರದ್ದುಪಡಿಸುತ್ತಾ, ದತ್ತುಕ ಪ್ರಕಾರ ಹಾಗೂ ಪೋತಿ ವಾರಸ ಪ್ರಕಾರ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡಂತೆ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ಅಂಗೀಕರಿಸುತ್ತಾ,** ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ಹೋಬಳಿ ಜಿ.ನಾಗಲಾಪುರ ಗ್ರಾಮದ ಸ.ನಂ.345/ಇ ಪೈಕಿ ವಿಸ್ತೀರ್ಣ:00 ಎಕರೆ 90 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಮರಿಯಮ್ಮನಹಳ್ಳಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ: ಹೆಚ್.8/2011-12 ದಿನಾಂಕ:21.11.2011 ವನ್ನು ರದ್ದುಪಡಿಸುತ್ತಾ, ದತ್ತುಕ ಪ್ರಕಾರ ಹಾಗೂ ಪೋತಿ ವಾರಸ ಪ್ರಕಾರ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ತಹಶೀಲ್ದಾರರು, ಹೊಸಪೇಟೆ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:09.06.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ ]
**ಸಹಾಯಕ ಆಯುಕ್ತರು,**
**ಹೊಸಪೇಟೆ.**

ಸಹಾಯಕ ಆಯುಕ್ತರು ಹೊಸಪೇಟೆ.

ವಾದಿ : ಪ್ರತಿವಾದಿಗಳಿಗೆ
<u>ಪ್ರತಿಯನ್ನು</u>:- ತಹಶೀಲ್ದಾರರು, ಹೊಸಪೇಟೆ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.